# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ-576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

### ಹವಾಮಾನ ಮುನ್ಸೂಚನೆಯ ಅವಧಿ 08-10-2022 ರಿಂದ 12-10-2022

ಸಂ. ಗ್ರಾ.ಕೃ.ಹ.ಸೇ.ಬ/076/2022 ದಿನಾಂಕ: 07.10.2022

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 08-10-2022 ರಿಂದ 12-10-2022 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೂಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ-1 (08.10.2022) | ದಿನ-2 (09.10.2022) | ದಿನ-3 (10.10.2022) | ದಿನ-4 (11.10.2022) | ದಿನ-5 (12.10.2022) | | |
| ಮಳೆ ಪ್ರಮಾಣ (ಮಿ.ಮೀ.) | 9 | 6 | 14 | 8 | 19 | 9.5 | 56↑ |
| ಗರಿಷ್ಠ ಉಷ್ಣಾಂಶ (°C) | 29 | 29 | 29 | 29 | 29 | 29.4 | 29↓ |
| ಕನಿಷ್ಠ ಉಷ್ಣಾಂಶ (°C) | 22 | 23 | 24 | 24 | 24 | 22.6 | 23.4↑ |
| ಮೋಡದ ಹೊದಿಕೆ (ಒಕ್ಟಾ) | 7 | 6 | 8 | 8 | 7 | 6 | 7↑ |
| ಗರಿಷ್ಠ ಆರ್ದ್ರತೆ (ಶೇ.) | 93 | 93 | 94 | 94 | 94 | 93.2 | 93.6↑ |
| ಕನಿಷ್ಠ ಆರ್ದ್ರತೆ (ಶೇ.) | 73 | 73 | 75 | 75 | 75 | 79.4 | 74.2↓ |
| ಗಾಳಿಯ ವೇಗ (Kmph) | 9 | 9 | 8 | 8 | 7 | 6.4 | 8.2↑ |
| ಗಾಳಿಯ ದಿಕ್ಕು (°) | 252 | 248 | 124 | 124 | 117 | 308 | 173↓ |
| ಮುನ್ಸೂಚನೆ | TSH | TSH | NIL | NIL | NIL | | |
| ಸಂಭವನೀಯತೆ (%) | >50- ≤75% | >25- ≤50% | >50- ≤75% | >50- ≤75% | >50- ≤75% | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 12.10.2022 ರಿಂದ 18.10.2022 ರವರೆಗೆ ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ.**

### ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಮೋಡಕವಿದ ವಾತಾವರಣವಿರಲಿದ್ದು ಗುಡುಗು-ಮಿಂಚು ಸಹಿತ ಜಿಲ್ಲೆಯಾದ್ಯಂತ, ಹಲವೆಡೆ ಹಗುರದಿಂದ ಸಾಧಾರಣದಿಂದ ಮಳೆಯಾಗುವ ಸಾಧ್ಯತೆ ಇದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **29°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **22-24°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **93%** ರಿಂದ **94%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **73%** ರಿಂದ **75%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **7-9** ಕೀ.ಮೀ. ಪ್ರತಿ ಘ.ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2011 | 2012 | 2013 | 2014 | 2015 | 2016 | 2017 | 2018 | 2019 | 2020 | 2021 | 2022 |
|---|---|---|---|---|---|---|---|---|---|---|---|---|---|
| Rainfall | 3790.4 | 3628.1 | 2984.2 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3425.1 |
| Rainy days | 110 | 128 | 105 | 127 | 112 | 107 | 119 | 121 | 112 | 123 | 126 | 152 | 107 |


Realised Rainfall (29th Sept to 05th Octo, 2022)




Rainfall Forecast Map (07th Octo to 13th Octo 2022)



Standardized Precipitation Index Outlook (08.09.2022 to 05.10.2022)



Normalized Difference Vegetation Index



# ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

## ತೋಟಗಾರಿಕೆ ಬೆಳೆಗಳು:

| | |
|---|---|
| **ಸಾಮಾನ್ಯ ಸಲಹೆ** | **ರೈತರು ಮತ್ತು ಸಾರ್ವಜನಿಕರು ಹವಾಮಾನ ಮುನ್ಸೂಚನೆ ಮತ್ತು ಬೆಳೆ ಸಲಹೆಯ ಮಾಹಿತಿ ಪಡೆಯಲು ಮೇಘದೂತ್ ಆ್ಯಪ್‌ನ್ನು ಡೌನ್ಲೋಡ್ ಮಾಡಿಕೊಳ್ಳುವುದು.** |
| **ಅಡಿಕೆ (ಕಳೆ ನಿಯಂತ್ರಣ)** | ➢ ತೋಟಗಳಲ್ಲಿ ಕಳೆ ನಿಯಂತ್ರಿಸಲು ಗ್ಲೈಫೋಸೆಟ್ (ಅಮೋನಿಯಂ ಉಪ್ಪು) 71% ಎಸ್.ಜಿ. 4 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಕಳೆಗಳ ಮೇಲೆ ಸಿಂಪಡಿಸಿ. ಅಡಿಕೆ ಮರಕ್ಕೆ ಸಿಂಪರಣೆ ತಗುಲದಂತೆ ಎಚ್ಚರ ವಹಿಸಿ.<br>➢ ಒಣಗಿದ ಹಿಂಗಾರ ಮತ್ತು ರೋಗ/ಕೀಟ ಭಾದೆಗೆ ತುತ್ತಾದ ಅಡಿಕೆ ಕಾಯಿಗಳನ್ನು ಸಂಗ್ರಹಿಸಿ ನಾಶ ಮಾಡುವುದು. |
| **ಅಡಿಕೆ (ಪೋಷಕಾಂಶ ನಿರ್ವಹಣೆ)** | ➢ ರೈತರು ಗೊಬ್ಬರ (100ಗ್ರಾಂ:40ಗ್ರಾಂ:140ಗ್ರಾಂ ಸಾರಜನಕ/ರಂಜಕ/ಪೊಟ್ಯಾಷ್ ಪ್ರತಿ ಮರಕ್ಕೆ)ಹಾಕುವ 15-20 ಮುನ್ನ ಪ್ರತಿ ಎಕರೆಗೆ 200ಕೆ.ಜಿ ಕೃಷಿ ಸುಣ್ಣವನ್ನು ಹಾಕುವುದು |
| **ಗೇರು-(ಕಾಂಡಕೊರಕ)**  | ಬಾಧಿತ ಭಾಗವನ್ನು ಸ್ವಚ್ಛಗೊಳಿಸಿ ನಂತರ ಆ ಭಾಗವನ್ನು ಮರಳು ಮಿಶ್ರಿತ ಕ್ಲೋರೋಫೈರಿಫಾಸ್ ಹರಳುಗಳಿಂದ ಮುಚ್ಚುವುದು. |
| **ತೆಂಗು (ರೈನೋಸೊರೆಸ್ ದುಂಬಿ)**  | ➢ ಗೊಬ್ಬರದ ಹೊಂಡದಿಂದ ಗೊಬ್ಬರವನ್ನು ಎತ್ತಿದಾಗಲೆಲ್ಲಾ (ಕೀಟಗಳು ಸಂತಾನೋತ್ಪತ್ತಿ ಮಾಡುವ ಸ್ಥಳ) ಜೀರುಂಡೆಯ ವಿವಿಧ ಹಂತಗಳನ್ನು ಸಂಗ್ರಹಿಸಿ ನಾಶಮಾಡಬೇಕು.<br>➢ ಕೀಟಗಳ ಶಾಶ್ವತೆಯನ್ನು ಪರೀಕ್ಷಿಸಲು ಗೊಬ್ಬರದ ಹೊಂಡಗಳಲ್ಲಿ ಎಂಟೋಮೊಪಾಥೋಜೆನ್ ಅಂದರೆ ಶಿಲೀಂಧ್ರವನ್ನು (ಮೆಟಾರ್ಜೀಯಂ ಅನಿಸೊಪ್ಲಿಯಾ) ಸೇರಿಸುವುದು.<br>➢ ಪ್ರತಿ ಕಟಾವಿನಲ್ಲಿ ಮರದ ಸುಳಿಗಳನ್ನು ಪರೀಕ್ಷಿಸಿ ಮತ್ತು ದೊಡ್ಡ ಜೀರುಂಡೆಗಳನ್ನು ಹೊರತೆಗೆದು ಕೊಲ್ಲುವುದು.<br>➢ ಸುಳಿಯಲ್ಲಿರುವ ಎಲೆಗಳಲ್ಲಿ ಒಳಗಿನ ಮೂರು ಎಲೆಗಳ ತಳದಲ್ಲಿ ಕ್ಲೋರೋಫೈರಿಫಾಸ್ 10ಉ+ಮರಳು (1:2) ಪ್ರತಿ ಮರಕ್ಕೆ 150 ಗ್ರಾಂ ನಂತೆ ಸೇರಿಸುವುದು.<br>➢ ರಂಧ್ರಗಳಿರುವ ಸಣ್ಣ ಪ್ಲಾಸ್ಟಿಕ್ ಚೀಲಗಳಲ್ಲಿ ಕ್ಲೋರೋಫೈರಿಫಾಸ್ 10ಉ. 5 ಗ್ರಾಂ ನ್ನು ಹಾಕಿ ಎರಡು ಒಳಗಿನ ಎಲೆಯ ಅಕ್ಷಗಳಲ್ಲಿ ಇರಿಸುವುದು. ಪ್ರತೀ 25-30 ದಿನಗಳಿಗೊಮ್ಮೆ ಬದಲಾಯಿಸುತ್ತಿರುವುದು. |
| **ತೆಂಗು (ಕಾಂಡ ಸೋರುವ ರೋಗ)**  | ➢ ಬಾಧಿತ ಭಾಗವನ್ನು ಸ್ವಚ್ಛಗೊಳಿಸಿ ನಂತರ ಆ ಭಾಗವನ್ನು 10% ಬೋರ್ಡೋ ಪೇಸ್ಟ್‌ನ್ನು ಹಚ್ಚುವುದು ಅಥವಾ 100ಮಿ.ಲೀ ನೀರಿಗೆ 8-10 ಗ್ರಾಂ. ಬ್ಲೈಟಾಕ್ಸ್ ನ್ನು ಮಿಶ್ರಿಸಿ ಬುಡಕ್ಕೆ ಹಾಕುವುದು ಅಥವಾ 2ಮಿ.ಲೀ ಹೆಕ್ಸಾಕೊನೊಜೋಲ್‌ನ್ನು ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಿಸಿ ಬುಡಕ್ಕೆ ಹಾಕುವುದು (ಪ್ರತಿ ಮರಕ್ಕೆ 8-10ಲೀಟರ್) |
| **ತೆಂಗು (ಕಳೆ ನಿರ್ವಹಣೆ)** | ➢ ತೋಟಗಳಲ್ಲಿ ಕಳೆ ನಿಯಂತ್ರಿಸಲು ಗ್ಲೈಫೋಸೆಟ್ (ಅಮೋನಿಯಂ ಉಪ್ಪು) 71% ಎಸ್.ಜಿ. 4 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಕಳೆಗಳ ಮೇಲೆ ಸಿಂಪಡಿಸಿ. ತೆಂಗಿನ ಮರಕ್ಕೆ ಸಿಂಪರಣೆ ತಗುಲದಂತೆ ಎಚ್ಚರ ವಹಿಸಿ. |
| **ಅಡಿಕೆ (ಪೋಷಕಾಂಶ ನಿರ್ವಹಣೆ)** | ➢ ರೈತರು ಗೊಬ್ಬರ ಹಾಕುವ 15-20 ಮುನ್ನ ಪ್ರತಿ ಎಕರೆಗೆ 200ಕೆ.ಜಿ ಕೃಷಿ ಸುಣ್ಣವನ್ನು ಹಾಕುವುದು.(330 ಗ್ರಾಂ ಸಾರಜನಕ : 200 ಗ್ರಾಂ ರಂಜಕ : 800ಗ್ರಾಂ ಪೊಟ್ಯಾಷ್ ಮತ್ತು 50ಕೆ.ಜಿ ಕೊಟ್ಟಿಗೆ ಗೊಬ್ಬರ) |
| **ಬಾಳೆ (ಸಾಮಾನ್ಯ ಸಲಹೆ)** | ➢ 5 ತಿಂಗಳ ನಂತರ ಪ್ರತಿ ಲೀಟರ್ ನೀರಿಗೆ 5ಗ್ರಾಂ. ಬನಾನ ಸ್ಪೆಷಲ್(ಲಘು ಪೋಷಕಾಂಶ) ಮಿಶ್ರಿಸಿ ಸಿಂಪಡಿಸುವುದು. (15ಲೀ. ಸ್ಪ್ರೇಯರ್‌ಗೆ ಒಂದು ನಿಂಬೆ ಹಣ್ಣು ಹಾಗೂ ಒಂದು ಶಾಂಪೂವನ್ನು ಬೆರೆಸಬೇಕು)<br>➢ ಬಾಳೆ ಬೆಳೆಯಲ್ಲಿ ಉತ್ತಮ ಗುಣಮಟ್ಟ ಹಾಗೂ ಅಧಿಕ ಇಳುವರಿ ಪಡೆಯಲು ಪ್ರತಿ ಬಾಳೆಗೊನೆಗೆ 10ಗ್ರಾಂ. ಯುರಿಯಾ+10ಗ್ರಾಂ. ಪೊಟ್ಯಾಷಿಯಂ ಸಲ್ಫೇಟ್+0.5ಕಿ.ಗ್ರಾ. ಹಸಿ ಸಗಣಿಯನ್ನು 100ಮಿ.ಲೀ ನೀರಿಗೆ ಬೆರೆಸಿ ಗೊನೆಯ ತುದಿಗೆ ಕಟ್ಟುವುದು. |
| **ಮಲ್ಲಿಗೆ (ಎಲೆಚುಕ್ಕೆ ರೋಗ)**  | ರೋಗಕ್ಕೆ ತುತ್ತಾದ ಎಲೆಗಳನ್ನು ಕಿತ್ತು ನಾಶ ಪಡಿಸುವುದು. ನಂತರ ಹತೋಟಿಗಾಗಿ ಹೆಕ್ಸಾಕೊನೊಜೋಲ್ 1ಮಿ.ಲೀ ಅಂತೆ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಿ. |
| **ಕಾಳುಮೆಣಸು (ಶೀಘ್ರ ಸೊರಗು ರೋಗ)**  | ➢ ಮುಂಜಾಗ್ರತ ಕ್ರಮವಾಗಿ ರೋಗ ಬಂದಿರುವ ಬಳ್ಳಿಗಳ ಎಲೆಗಳನ್ನು ಕಿತ್ತು ನಾಶಪಡಿಸಬೇಕು ಅನಂತರ ಬೇವಿನ ಹಿಂಡಿ ಮಿಶ್ರಿತ ಅಥವಾ ಸಹ್ಯಾದ್ರಿ ತ್ರಿಶೂಲ್ ಮಿಶ್ರಿತ ಕೊಟ್ಟಿಗೆ ಗೊಬ್ಬರವನ್ನು ಬಳ್ಳಿಗಳಿಗೆ ನೀಡಬೇಕು ಅಥವಾ 1% ಬೋರ್ಡೋ ದ್ರಾವಣವನ್ನು ಅಥವಾ 2ಗ್ರಾಂ ಮೆಟಾಲಾಕ್ಸಿಲ್+ ಮ್ಯಾಂಕೋಜೆಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಬುಡದ ಸುತ್ತ ಹಾಕಬೇಕು ಅಥವಾ ಸಿಂಪಡಿಸುವ್ವದು.<br>➢ ಉತ್ತಮ ಇಳುವರಿಯನ್ನು ಪಡೆಯಲು ಪೆಪ್ಪರ್ ಸ್ಪೆಷಲ್ ಅನ್ನು 5ಗ್ರಾಂ, ನಂತೆ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು. |
| **ಕಾಳುಮೆಣಸು (ನಿಧಾನ ಸೊರಗು ರೋಗ)** | ➢ ಮುಂಜಾಗ್ರತ ಕ್ರಮವಾಗಿ ರೋಗ ಬಂದಿರುವ ಬಳ್ಳಿಗಳ ಎಲೆಗಳನ್ನು ಕಿತ್ತು ನಾಶಪಡಿಸಬೇಕು ಅನಂತರ ಬೇವಿನ ಹಿಂಡಿ ಮಿಶ್ರಿತ ಅಥವಾ ಸಹ್ಯಾದ್ರಿ ತ್ರಿಶೂಲ್ ಮಿಶ್ರಿತ ಕೊಟ್ಟಿಗೆ ಗೊಬ್ಬರವನ್ನು ಬಳ್ಳಿಗಳಿಗೆ ನೀಡಬೇಕು ಅಥವಾ 2ಗ್ರಾಂ ಮೆಟಾಲಾಕ್ಸಿಲ್+ ಮ್ಯಾಂಕೋಜೆಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ನೀರಿಗೆ ಬೆರೆಸಿ ಬುಡದ ಸುತ್ತ ಹಾಕಬೇಕು ಅಥವಾ |

| | |
|---|---|
| | ಸಿಂಪಡಿಸುವುದು. |
| **ಕಾಳುಮೆಣಸು (ಸಾಮಾನ್ಯ ಸಲಹೆ)** | ➢ ಉತ್ತಮ ಇಳುವರಿಯನ್ನು ಪಡೆಯಲು ಪೆಪ್ಪೆರ್ ಸ್ಪೆಷಲ್ ಅನ್ನು 5ಗ್ರಾಂ, ನಂತೆ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು. |
| **ಸಹ್ಯಾದ್ರಿ ತ್ರಿಶೂಲ್** | ➢ ತೋಟಗಾರಿಕೆ ಬೆಳೆಗೆ ಸಹ್ಯಾದ್ರಿ ತ್ರಿಶೂಲ್ ಜೈವಿಕ ಗೊಬ್ಬರವನ್ನು ಒದಗಿಸುವುದು: 4ಕಿ.ಗ್ರಾಂ ಸಹ್ಯಾದ್ರಿ ತ್ರಿಶೂಲ್ ಜೈವಿಕ ಗೊಬ್ಬರದ ಜೊತೆಗೆ 1 ಕಿ.ಗ್ರಾಂ ಬೆಲ್ಲವನ್ನು 200ಲೀ. ನೀರಿನಲ್ಲಿ ಮಿಶ್ರಣ ಮಾಡಿಕೊಳ್ಳಬೇಕು. ಅಡಿಕೆ ಬೆಳೆಗೆ 2-3 ಲೀ. ತೆಂಗು ಬೆಳೆಗೆ 5-6ಲೀ. ಮತ್ತು ಕಾಳುಮೆಣಸಿನ ಬಳ್ಳಿಗೆ 2ಲೀಟರ್ ನಷ್ಟು ಗಿಡದ ಬುಡದ ಭಾಗಕ್ಕೆ ನೇರವಾಗಿ ಸುರಿಯಬೇಕು ಅಥವಾ ಶೋಧಿಸಿದ ನಂತರ ಹನಿ ನೀರಾವರಿ ಮೂಲಕ ಕೊಡಬಹುದು ಹಾಗೂ ಇತರೆ ಎಲ್ಲಾ ತರಕಾರಿ ಬೆಳೆಗಳಿಗೆ ಮತ್ತು ಹೂವಿನ ಬೆಳೆಗಳಿಗೆ, ಬೆಳೆಯ ವಯಸ್ಸಿನ ಆಧಾರದ ಮೇಲೆ ಬಳಸಬಹುದು ಅಥವಾ 400 ಕಿ.ಗ್ರಾಂ ಚೆನ್ನಾಗಿ ಕಳಿತ ಹಟ್ಟಿ ಗೊಬ್ಬರದೊಂದಿಗೆ 4 ಕಿ.ಗ್ರಾಂ ಸಹ್ಯಾದ್ರಿ ತ್ರಿಶೂಲ್ ಜೈವಿಕ ಗೊಬ್ಬರವನ್ನು ಮಿಶ್ರಣ ಮಾಡಿ 10-15 ದಿನಗಳ ನಂತರ ಬೆಳೆಗಳಿಗೆ ಒದಗಿಸುವುದು. |
| **ಭತ್ತ (ಎರಡನೇ ಮೇಲು ಗೊಬ್ಬರ)** | ಮೊದಲನೇ ಹಂತದ ಮೇಲುಗೊಬ್ಬರ ನೀಡಿದ ನಂತರ ಕಳೆ ನಿಯಂತ್ರಣ ಮಾಡುವುದು ತದನಂತರ ಎರಡನೇ ಹಂತದ ಮೇಲು ಗೊಬ್ಬರವಾಗಿ 17.5 ಕೆ.ಜಿ ಯೂರಿಯಾ ಮತ್ತು 13.5 ಕೆ.ಜಿ ಪೊಟ್ಯಾಷ್ ನೀಡುವುದು. |
| **ಜಾನುವಾರು-ಹಸು (ಸಾಮಾನ್ಯ ಸಲಹೆ)** | ಗರ್ಭಾವಸ್ಥೆಯಲ್ಲಿರುವ ಜಾನುವಾರುಗಳನ್ನು ಸೂರ್ಯನ ಬೆಳಕಿಗೆ ಮೈಒಡ್ಡುವಂತೆ ಮಾಡುವುದು, ಇದರಿಂದ ಮುಂದಿನ ದಿನಗಳಲ್ಲಿ ಹಾಲು ಜ್ವರ ಬರುವ ಸಾಧ್ಯತೆ ಕಡಿಮೆಯಾಗುವುದು. ಸಮತೋಲಿತ ಮೇವನ್ನು ನೀಡುವುದು. ಜಾನುವಾರುಗಳನ್ನು ಒಣಗಿದ ಹಾಗೂ ಎತ್ತರದ ಪ್ರದೇಶಗಳಲ್ಲಿ ಕಟ್ಟುವುದು ಸೂಕ್ತವಾಗಿದೆ. ಜಾನುವಾರುಗಳಿಗೆ ಶೇಖರಿಸಿದ ಮೇವನ್ನು ನೆನೆಯದಂತೆ ಜಾಗೃತಿ ವಹಿಸುವುದು. |

**(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)**

**ಶ್ರೀ. ಪ್ರವೀಣ್ ಕೆ.ಎಮ್,**
**ತಾಂತ್ರಿಕ ಅಧಿಕಾರಿಗಳು,**
**ಜಿ.ಕೆ.ಎಮ್.ಎಸ್-ವಿಭಾಗ,**
**ವ.ಕೃ.ತೋ.ಸಂ.ಕೇ-ಬ್ರಹ್ಮಾವರ.**

**ಡಾ. ಕೆ. ವಿ. ಸುಧೀರ್ ಕಾಮತ್,**
**ನೋಡಲ್ ಅಧಿಕಾರಿಗಳು,**
**ಜಿ.ಕೆ.ಎಮ್.ಎಸ್-ವಿಭಾಗ,**
**ವ.ಕೃ.ತೋ.ಸಂ.ಕೇ-ಬ್ರಹ್ಮಾವರ.**